CW.1 PW.2

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ

CC No. 203/2015

| | |
|---|---|
| ಸಾಕ್ಷಿದಾರರ ಹೆಸರು | ನಾರಾಯಣಪ್ಪ |
| ತಂದೆಯ ಹೆಸರು | ಲೇಟ್ ಮಾರಪ್ಪ |
| ವಯಸ್ಸು | 64 ವರ್ಷ |
| ವೃತ್ತಿ | ಕೂಲಿ |
| ವಿಳಾಸ | ಕನಕಪುರ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 25.02.2025 |

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-

ನನಗೆ ಈ ಪ್ರಕರಣದ ಆರೋಪಿಯ ಬಗ್ಗೆ ಗೊತ್ತಿಲ್ಲ. ಚಾಸಾ-2 ರಿಂದ ಚಾಸಾ-5 ರವರು ಗೊತ್ತಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಗುರುತಿಸಿದ ದಾಖಲೆಯು ಸ್ಥಳ ಮತ್ತು ಅಮಾನತು ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ನಿಪಿ-1 ಕ್ಕೆ ನಾನು ಯಾವಾಗ ಸಹಿ ಮಾಡಿರುತ್ತೇನೆ ಎನ್ನುವುದು ನನಗೆ ಗೊತ್ತಿಲ್ಲ. ನಿಪಿ-1 ಕ್ಕೆ ನಾನು ಪೋಲೀಸರ ಹೇಳಿಕೆ ಮೇರೆಗೆ ಅವರ ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ-1 ಕ್ಕೆ ಪೊಲೀಸರು ಯಾವ ವಿಚಾರಕ್ಕೆ ಸಂಬಂಧಿಸಿದಂತೆ ನನ್ನ ಸಹಿ ಪಡೆದಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ಕ್ಕೆ ಆ ದಿನ ನನ್ನೊಂದಿಗೆ ಮತ್ತಾರು ಸಹಿ ಮಾಡಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಸ್ಥಳ ಪರಿಶೀಲನೆ ಮಾಡಿಲ್ಲ ಮತ್ತು ನನಗೆ ಈ

CW.1 PW.2

ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಸ ಸ ಅ ರವರು ಕೋರಿದ್ದು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ ಸ ಅ ರವರಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ- ಸ ಸ ಅ ರವರಿಂದಃ-

ದಿಃ 27.03.2014 ರಂದು ಬೆಳಿಗ್ಗೆ 11.50 ರಿಂದ 12.45 ರ ಸಮಯದಲ್ಲಿ ಪೋಲೀಸರು ಕಮಲಾಪುರದೊಡ್ಡಿ ಯಲ್ಲಿರುವ ಆರೋಪಿಯ ಮನೆಯ ತೋಟದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರು ಸ್ಥಳ ಮಹಜರ್ ಮಾಡುವ ಕಾಲಕ್ಕೆ ನನ್ನ ಹಾಗೂ ಚಾಸಾ-2 ರಿಂದ ಚಾಸಾ-4 ರವರ ಸಮಕ್ಷಮ ಸ್ಥಳ ಮಹಜರ್ ಕ್ರಮ ಜರುಗಿಸಿ ಆರೋಪಿಯ ತಾಬಾದಲ್ಲಿದ್ದ ಬಿಳಿ ಬಟ್ಟೆ ಕಟ್ಟಿದ್ದ 2 ಹೂತಿಟ್ಟ ಬೆಲ್ಲದ ಕೊಳೆ ಇರುವ 2 ಬಿಂದಿಗೆಗಳನ್ನು ಅಮಾನತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಈ ಮೇಲಿನ ವಿಚಾರಕ್ಕೆ ಸಂಬಂಧಿಸಿದಂತೆ ಪೋಲೀಸರು ಸ್ಥಳದಲ್ಲಿ ಪರಿಶೀಲನೆ ಮಾಡಿ ವಸ್ತುಗಳನ್ನು ಅಮಾನತು ಪಡಿಸಿಕೊಂಡು ಒಂದು ಮಹಜರ್ ನ್ನು ಸಹ ತಯಾರಿಸಿ ಅದರ ವಿಚಾರ ನನಗೆ ಓದಿ ಹೇಳಿ ಅದರ ಮೇಲೆ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ 3 ಬಾಟಲ್ ಗಳನ್ನು ತೋರಿಸಿ ಇವೇ ಬಾಟಲಿಗಳಲ್ಲಿ ಆ ದಿನ ಪೋಲೀಸರು ರಾಸಾಯನಿಕ ಪರೀಕ್ಷೆಗಾಗಿ ಸೇಂದಿಯನ್ನು ಪ್ರತ್ಯೇಕವಾಗಿ ನಿಮ್ಮ ಸಮಕ್ಷಮ ತೆಗೆದ್ದದ್ದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಆರೋಪಿಯು ನನಗೆ ಪರಿಚಯಸ್ಥರಾದ ಕಾರಣ, ಅವರಿಗೆ ಸಹಾಯವಾಗಲೀ ಎಂದು ನಿಪಿ-1 ರಲ್ಲಿರುವ ಸಂಗತಿಗಳು ನನಗೆ ಗೊತ್ತಿದ್ದರೂ, ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ-ಇಲ್ಲ.

ಮರುವಿಚಾರಣೆ ಇಲ್ಲ. ಓ ಹೇ ಕೇ ಸರಿ ಇದೆ

(ರಾಧಾ ಎಸ್.)
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಕನಕಪುರ .